ಎ. ಸಿ. ಶೆಣೈರವರ
ಮಂಗಳೂರು ಗಣಪತಿ
ಬೀಡಿಗಳನ್ನೇ ಉಪಯೋಗಿಸಿ
ಒಳ್ಳೇ ಸಿಸ್ಟಾಣಿ ಹೊಗೆಸೊಪ್ಪಿನಿಂದಲೇ
ತಯಾರಿಸಿದ ಈ ಬೀಡಿಯನ್ನು ಒಂದಾವ
ರ್ತಿ ಉಪಯೋಗಿಸಿದನೆ ಖಂಡಿತವಾಗಿ
ನಿಮ್ಮನ್ನು ಆಕರ್ಷಿಸುವುದು.
ಎಲ್ಲೆಲ್ಲಿಯೂ ಏಜೆಂಟರ ಬೇಕು.
ವಿವರಗಳಿಗೆ— ಪಿ. ವಂಜಪ್ಪ,
ಹಳೇ ಅಗ್ರಹಾರ ಮೈಸೂರು

Weekly SATYAVADI Founded 197

ಸತ್ಯವಾದಿ

ಸಂಚಿಕೆ 26) ಶನಿವಾರ 23—1—1943 (ಸಂಪುಟ 87

Regd No. M. 1299
ವಾರಪತ್ರಿಕೆ ೬ ಕಾಸು

M L M S & S
ಮಂಗಳೂರು ಸುವರ್ಣ
ಸ್ಪೆಷಲ್ ಬೀಡಿಯನ್ನೇ
ಉಪಯೋಗಿಸಿ. ಒಳ್ಳೇ ಸಿಸ್ಟಾಣಿ ಹೊ
ಗೆಸೊಪ್ಪಿನಿಂದ ತಯಾರಿಸಲ್ಪಟ್ಟಿದೆ. ಒಂ
ದರ್ತಿ ಪರೀಕ್ಷಿಸಿ ನೋಡಿ.
ಸೈಸೂರು ಏಜೆಂಟರು, ಪಿ. ಮಂ
ಬೇರೆ ಸ್ಥಳಗಳಿಗೆ ಏಜೆಂಟರು ಬೆ

ಹೊಸ ಸುದ್ದಿ

ಟೈಪೋಲಿಯು ಇನ್ನೇನು ಬಿದ್ದಂತೆಯೇ ಎಂದೂ, ಸ್ಪೇನಿನ ಎಂಟನೆಯು ಸೈನ್ಯವು ರೊಮಿಲ್ಲಸನ್ನು ಟೈಪೋಲಿಜೀನಿಯುದಿಂದ ಆಚೆಗೆ ಅಟ್ಟುವುದರಲ್ಲಿದೆಯೆಂದೂ ಕೈರೋ ಸುದ್ದಿ.

ಕಾಕ್ಸಸ್ಸಿನಲ್ಲಿ ರಷ್ಯನರು ವಿಜಯಿಗಳಾಗುತ್ತಾರೆ.

ಗುರುವಾರ ಜರ್ಮನಿಯು ಮೇಲೌರ್ ಎ. ಎಫ್. ಸವರ್ಸ್ ಬಾಂಬುಹಾಕಿರುವರು

ಇಂಡಿಯಾ ಸರ್ಕಾರದವರು ಇಷ್ಟರಲ್ಲೇ ಮೂರು ಕಾಸಿನ ಪಿಲ್ಲೆಯನ್ನು ಚಲಾವಣೆಗೆ ತರುವರು. ಇದರ ಮಧ್ಯೆ ಒಂದು ರಂಧ್ರವಿರುವುದು

ಹಿಂದೂ ಮಹಾಸಭೆಯು ಫೆಬ್ರವರಿ 13 ರಲ್ಲಿ ದೆಹಲಿಯಲ್ಲಿ ಸೇರಲಿದೆ.

ಇಂಡಿಯಾ ಸರ್ಕಾರದವರು ಎಲ್ಲಾ ಸಣ್ಣ ನೌಕರರಿಗೂ ಕೊವಾಯಿಗಾಗಿ ಬರುವಾಗೆಯಿಂದ ನಾಲ್ಕಾಣೆಯಂತೆಗೆ ಒಡ್ಡಿ ಮಾಡಿರುತ್ತಾರೆ. ಇದು ರೈಲ್ವೆ ನೌಕರರಿಗೆ ಅನ್ವಯಿಸುವುದಿಲ್ಲ.

ಗ್ವಾಡಲ್‌ಕೆನಾರಿನಲ್ಲಿ 15000 ಜಪಾನ್ ಸೈನಿಕರಿದ್ದರು. ಈಗ 4000 ಮಾತ್ರ ಉಳಿದಿದ್ದಾರೆ

ಜಪಾನರು ನ್ಯೂ ಜೆಪಿಡಿಸ್ಸನ್ನು ಮುತ್ತಿ, ಅಲ್ಲಿ ಮಿತ್ರಸಂಡಲಿಯವರಿಂದ ಪೆಟ್ಟು ತಿಂದರು.

ಟೈಪೋಲಿ ಬಂದರಿನಲ್ಲಿ ಮಿತ್ರರಾಷ್ಟ್ರದವರು ಜಾವುಟ ಏರಿಸಿದರು.

ಮಿತ್ರರಾಷ್ಟ್ರದವರು ಹಡಗುಗಳನ್ನು ಕಳುಹಿಸಿದರೆ ನಾವು ಗೋಧಿಯನ್ನು ಬೇಕಾದರೂ ಕಳುಹಿಸುವುದಾಗಿ ಫ್ರೆಂಚ್ ಆಫ್ರಿಕಾ ಸರ್ಕಾರದವರು ಹೇಳುತ್ತಿದ್ದಾರೆ.

ಸ್ಪೀಕರ್ ಕೌನ್ಸಿಲರಾಗಬೇಕೆ ?

(ಒಕ್ಕಣೆಯಿಂದ ದು)

ರಾಜಮಂತ್ರಪ್ರವೀಣ ಶ್ರೀ ಎ. ವಿ. ರಾಮನಾಥಯ್ಯನವರು ಧಂಕಪುರಕ್ಕೆ ದಿವಾನರಾಗಿ ಹೋಗುವುದರಿಂದ ಕೌನ್ಸಿಲರ್ ಒಂದು ಸ್ಥಾನವು ಖಾಲಿ ಬೀಳುತ್ತದೆ. ಈಗ ನಮ್ಮಲ್ಲಿ ಅನೇಕ ಸ್ಪೀಕರ ವಿದ್ಯಾಧ್ಯಕ್ಷರವಾತಿ ಯೂನಿವರ್ಸಿಟಿಯಿಗಳನ್ನು ಕೆಗೆದುಕೊಂಡಿರುತ್ತಾರೆ. ಮುಸೆವ್ ವಿಜಯಲಕ್ಷ್ಮಿಯವರಂತೆ ಕೆಲವರು ಮಾಡಬಲ್ಲವು. ಈಗ ರೆಸ್ಪೆಂಟೇಟಿನ್ ಅಸೆಂಬ್ಲಿಯಲ್ಲಿ 9 ಮಂದಿ ಇರುವರು. ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿ ಇಬ್ಬರಿರುವರು. ಇದಲ್ಲದೆ ಮುನಿಸಿಪಾಲಿಟಿಯಲ್ಲೂ ಡಿಸ್ಟ್ರಿಕ್ಟ್ ಬೋರ್ಡಗಳಲ್ಲೂ ಅನೇಕರಿರುವರು. ವಿ ಸರ್ ಎ. ರಾಮಸ್ವಾಮಿ ಮುದಲಿಯಾರ್ ಸಿ. ಬಿ. ಎ. ರವರು ಇರುತ್ತಾರೆ ಎಂದು ಇಂಗ್ಲೆಂಡಿನಲ್ಲಿ ಮೂರು ವರ್ಷಕಾಲವಿದ್ದರು. ಇವರನ್ನಾಗಲೀ ಅಥವಾ ಮತಾರಾಧನೂ ಸ್ಪೀಕರ್ ರನ್ನಾಗಲೀ ಪತಕ್ಕೆ ಖಾಲಿಯಾಗಿರುವ ಕೌನ್ಸಿಲ್ ಪದವಿಗೆ ಕೆಗೆದುಕೊಳ್ಳಬಹುದು. ನಮ್ಮ ಮಹಾರಾಜರು ನಿರ್ಣಯಿಸಬೇಕು. ನಮ್ಮ ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವು. ಈ ಸಂದರ್ಭವನ್ನು ಸ್ಪೀಕರಿಗೆ ಕೊಟ್ಟರೆ ನಮ್ಮ ಸಂಸ್ಥಾನದ ಪದತಿಗಳನ್ನು ಸುಸಂಸ್ಥಿರುವ ಇತರ ಸಂಸ್ಥಾನಗಳೂ ಸ್ಪೀಕರಿಗೆ ಉಪ್ರೇಜನ ಕೊಡುವುದಲ್ಲದೆ, ನಮ್ಮ ಸಂಸ್ಥಾನಕ್ಕೂ ಕೀರ್ತಿ ಬರುವುದು.

ಮುಸಲ್ಮಾನರು ಒಟ್ಟಲಂಗಳ ಮೇಲೆ ಕುರಾನಿನ ವಾಕ್ಯಗಳು ಬರೆದಿರುವ ಒಟ್ಟಲಿನಲ್ಲಿ ಔಷಧಿಯನ್ನು ಕೊಟ್ಟರೆ ಖಾಯಿಲೆಯು ಬಹುಬೇಗನೆ ವಾಸಿಯಾಗುವದೆಂದು ತಿಳಿದಿರುವರು.

The Mysore State War Fund Lottery

(By kind permission of the Government of Mysore)

Three Lakhs of Tickets at Re 1 each on sale from 22nd November 1942 to 21st March 1943.

Half the gross collections will be distributed as prize

The Draw will take place on 13th June 1943

If all the tickets are sold the First Prize will be Rs. 18,75 and the Second Prize Rs. 9,375.

There are 250 other prizes

For particulars, please apply to—

The Secretary, Mysore War Fund, Public Offices, Bangalor

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದಾಗಿದ್ದು ಯಾವ ಜಿಲ್ಲೆಯಲ್ಲಿಯಾದರೂ ಸೇರಿಲ್ಲ : ನಮ್ಮ ಸ್ವಂತ ಏಜೆಂಟರಿಂದ ಕಂಡಿತವಾಗಿ ದೇವಸ್ಥಾನಗಳಲ್ಲಿಯೂ ದೇವತೆಗಳಿಗೂ ತಿರುಪತಿ ಪ್ರಸಾದಗಳಿಗೂ ಸಮ ಸಾಕೋಷವಾದಲ್ಲೂ ಉಪಯೋಗಿಸಬಹುದು ಅವಾಗದೆ

ಅತ್ಯಂತ ಪರಿಶುದ್ಧವಾದುದೇ
ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತ್ರೀಜ್ವಾಲ್
೧೪ ಗೋಪಿಲಿದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಯಾವುದೇ ಔಷಧದಲ್ಲಾದರೂ ಸರಿಸಿ ಮಿಶ್ರಿತವಾದಲ್ಲಿ ಕಾಡುವಷ್ಟು ಹಳೆಯದಾದ
ಅಜೀರ್ಣ — ಅತಿಸಾರಾದಿ ರೋಗಗಳನ್ನು
ಕ್ಷಣಮಾತ್ರದಲ್ಲಿ ಶೀಘ್ರವಾಗಿ ಪರಿಹರಿಸುವ
"ಡಿಸೆಂಟಿಸೈಡ"
ಇದು ಏನು? ಹೇಗಿದೆ? ಎಂಬುದನ್ನು
ಇದರ ಒಂದು ಬಾರಿಯ ಪರೀಕ್ಷೆಯಿಂದ ಮನಗಾಣಿರಿ
ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ದೊರೆಯುತ್ತದೆ

ಈ ವಾರದ ಪತ್ತೇದಾರಿ ಕಥೆ

ಸುಂದರೇಶ

ಲೇಖಕರು—ಎಂ. ಎ. ನಾರಾಯಣ, ಒಂಟಿಕೊಪ್ಪಲ್

(ಕಳೆದ ವಾರದಿಂದ ಮುಂದುವರಿದುದು)

4 ನೇ ಅಧ್ಯಾಯ

ಕತ್ತಲೆಯು ಎಲ್ಲೆಲ್ಲೂ ಆವರಿಸಿಕೊಂಡು ಬಂದಿತ್ತು. ರಾತ್ರಿ 12 ಗಂಟೆಯ ಸಮಯ. ಇಷ್ಟರಲ್ಲಿಯೇ ಇಬ್ಬರು ಯುವಕರು ಅವರು ಹೇಳಿದ ಮನೆಗೆ ಬಂದು ಮನೆಯಲ್ಲಿರುವ ಎಲ್ಲಾ ಪದಾರ್ಥಗಳನ್ನೂ ಗೋಪ್ಯವಾಗಿಟ್ಟು ಮನೆಯ ಸಾಮಾನುಗಳೂ ಕಾಯುತ್ತಿದ್ದರು. ಇಷ್ಟರಲ್ಲಿಯೇ, ಧಡಾ, ಧಡಾ, ಎಂದು ಶಬ್ದವಾಯಿತು. ಆಗ ಅವರು ಒಂದು ನೋಡುವಾಗ ಆ ಜಂಡಾಲರು ಮನೆಯನ್ನು ಧ್ವಂಸ ಮಾಡಿದಿಸಿ ಸುಂದರೇಶನನ್ನು ಹುಡುಕುತ್ತಿದ್ದರು. ಅವರಲ್ಲೊಬ್ಬನು ಬಂದೂಕಿನಿಂದ ಹೊಡೆಯಲು ಸುಂದರೇಶನೂ ಕರಿಯನೂ, ಮೂರ್ಛೆಹೊಂದಿದರು.

ವಾಚಕರೇ! ಆ ಯುವಕರಾರೆಂಬುದನ್ನು ಕಾಣಿರಾ? ಅವರೇ ನಮ್ಮ ಸುಂದರೇಶ ಮತ್ತು ಕರಿಯ.

ಇತ್ತ ನೀಚನಾದ ದುರ್ಜಯನು ರತ್ನಕಲೆಯ ಕೊಠಡಿಗೆ ಬಂದು— ಎಲೆ, ಏಕೆ ವ್ಯಥೆಪಡುವೆ. ಆ ಪತ್ತೇದಾರನು ನನ್ನಗೃಹದಲ್ಲಿ ಬಂಧಿತನಾಗಿ ಬಿದ್ದಿರುವನು. ಈಗಲೇ ನಿನ್ನನ್ನು ನನ್ನ ಹೆಂಡತಿಯಾಗಿ ಮಾಡಿಕೊಳ್ಳುವೆನು, ಎಂದನು.

ರತ್ನಕಲೆಯು— ಈಗಲೇ ನಿನ್ನನ್ನ ಸಂಹರಿಸಿ ನನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವೆನು, ಎಂದಳು

ಹೀಗೆ ವಾಗ್ವಾದವು ನಡೆಯಲು, ಅವಸ ಕೈಲಿ ಏನೂ ಸಾಗದೆ, ನಾಳೆಯ ದಿನದವರೆಗೂ ಯೋಚನೆಮಾಡಲು ಅವಕಾಶಕೊಟ್ಟಿರುತ್ತೇನೆ, ನಾಳೆ ಒಪ್ಪದಿದ್ದ ಪಕ್ಷದಲ್ಲಿ ನಿನ್ನನ್ನು .... ಎಂದನು.

ಇತ್ತಲಾಗಿ ಪತ್ತೇದಾರನು ಆ ಗುಹೆಯಲ್ಲಿರುವ ಕಿರುಮನೆಯಲ್ಲಿ ಬಿದ್ದಿದ್ದನು. ದುರ್ಜಯನು ತನ್ನ ಸೇವಕರನ್ನು ಕರೆದು, ಅವನಿಗೆ ಕಾವಲಾಗಿರಿಸಿ ಹೊರಟು ಹೋದನು.

o o o

5 ನೇ ಅಧ್ಯಾಯ

ಇತ್ತ ಸೇವಕನಾದ ಕರಿಯನು ಕಳ್ಳರ ವೇಷವನ್ನು ಧರಿಸಿ ಹಿಂದೆ ಹೇಳಿದ ಜಗುಲಿ ಮರೆಯಲ್ಲಿ ನಿಂತಿದ್ದನು. ಆಗ ಒಬ್ಬ ಅಶ್ವಾರೋಹಿಯು ಕೆಂದಕವನ್ನು ದಾಟಿ ಅಲೇ ಮರೆಯಾದನು.

ಹೀಗೆ ಸ್ವಲ್ಪ ಹೊತ್ತಾದ ಮೇಲೆ ಕರಿಯನಿಗೆ ಅತಿ ಸುಂದರವಾದ ರಾಮನ ಸೊಳಕ್ಕೆ ಹೋಗಿ ದೀಪಜ್ವಲಿಸಿ ಬಂದೀಖಾನೆಯನ್ನು ಕಾಯುತ್ತಿದ್ದವರು ಓಡಿ ಬರಲು ಅವರನ್ನು ಕೊಂದು ಕೋಮಲೆಯನ್ನೂ ಸುಂದರೇಶನನ್ನೂ ಬಿಡಿಸಿಕೊಂಡ, ಆ ಶವಗಳನ್ನು ಬಂದೀಖಾನೆಯಲ್ಲಿ ಹಾಕಿ ಮೂವರೂ ಪರಾರಿಯಾದರು

ಹೀಗೆ ಇಂತಿರಲಾಗಿ ಕಳ್ಳರು ಬಂದು ನೋಡಲು ಆ ಮನೆಯಲ್ಲಿ ಯಾವೂ ಇಲ್ಲದುದನ್ನು ಕಂಡು ಕೋಪದಿಂದ ದುರ್ಜಯನು ಸೇವಕರನ್ನು ಕುರಿತು,— ಈ ಲೇ ಅವನು ಎಲ್ಲಿದ್ದರೂ ಕೊಂದುಹಾಕಿ ಬನ್ನಿ, ಎಂದನು. ಆಗ ಅವನ ಅಪ್ಪಣೆ ಪ್ರಕಾರ ಎಲ್ಲರೂ ಹೊರಟರು.

ಎಲ್ಲೆಲ್ಲಿ ನೋಡಿದರೂ ಇವರ ಅವಾಂತರ. ದರೋಡೆ! ಅಂತೂ ರಾತ್ರಿ ಕಾಲದಲ್ಲಿ ಜನಗಳು ಸಂಚಾರ ಮಾಡುವುದು ಕಷ್ಟವಾಯಿತು.

o o o

6 ನೇ ಅಧ್ಯಾಯ

ಸರಿರಾತ್ರಿ 2 ಗಂಟೆಯ ಸಮಯ. ಯಾವನೋ ಒಬ್ಬ ಯುವಕನು ಗುಹೆಯಲ್ಲಿ ಬಂದು ಸಂಚರಿಸುತ್ತಿದ್ದಾನೆ. ಆ ದಿನ ಅಮಾವಾಸ್ಯೆ. ಹೀಗಿರಲು ಕಳ್ಳರು. ಒಳಗೆ ಸುತ್ತಾಡುತ್ತಾ ಏನನ್ನೋ ಹೇಳಿಕೊಳ್ಳುತ್ತಿದ್ದರು. ಇಷ್ಟರಲ್ಲಿಯೇ ಒಳಗಿನಿಂದ ಬರುತ್ತಿದ್ದ ಇಬ್ಬರು ಜಂಡಾಲರಿಗೆ ಏಕಕಾಲದಲ್ಲಿ ಎರಡು ಗುಂಡು ತಗಲಿ ಅವರು ಸತ್ತರು. ಹೀಗೆ ಒಳಗಿದ್ದ ಕಳ್ಳರೆಲ್ಲರೂ ಇದನ್ನು ನೋಡುವುದಕ್ಕೆ ಬರಲು ಇದೇ ಸಮಯವೆಂದು ಅಲ್ಲಿ ನರಳುತ್ತಾ ಬಿದ್ದಿದ್ದ ತಾಯಿಯಾದ ರತ್ನಕಲೆಯನ್ನು ಎತ್ತಿಕೊಂಡು ವರಾಂಡಾದನು. ಸಂತರ ಸುಂದರೇಶನು ಬಹು ಸಾಹಸಮಾಡಿ, ಅಲ್ಲಿನ ಎಲ್ಲಾ ಸಂಗತಿಯನ್ನೂ ತಿಳಿದು ಧರ್ಮಪುರಿಗೆ ಹೋಗಿ ಪೋಲೀಸರನ್ನು ಗೊತ್ತುಮಾಡಿಕೊಂಡನು,

ಇಲ್ಲಲ್ಲಿ ಪೋಲೀಸರು ಗುಪ್ತವೇಷದಿಂದ ಗಲಿಯೊಳಗೆ ಅವಿತುಕೊಂಡಿದ್ದಾರೆ. ಕಳ್ಳರೆಲ್ಲರೂ ಒಂದು ರೂಮಿನಲ್ಲಿ ಕುಳಿತು ಮಾತನಾಡುತ್ತಿದ್ದಾರೆ. ಇತ್ತ ಪತ್ತೇದಾರನು ಕುದುರೆಯವನನ್ನು ತೆಗೆದು ಕಳ್ಳರು ದಾಟಿಹೋಗದಂತೆ ಮಾಡಿದನು. ಇದೇ ಸಮಯವೆಂದು ಸೀಳ್ಕೆಸಿ ಎರಡು ಗುಂಡುಗಳನ್ನು ಗುಂಪು ಸೇರಿದ್ದ ಕಡೆಗೆ ಬಿಡಲು ಅವರಲ್ಲಿ ಮೂವರು ಪ್ರಾಣಬಿಟ್ಟರು. ಆಗ ಕಾದಿದ್ದ ಪೋಲೀಸರು ಅಲ್ಲಿರುವರಲ್ಲಿ ಕೆಲವರನ್ನು ಕೊಂದು ಕೆಲವರನ್ನು ಸೆರೆಹಿಡಿದರು. ದುರ್ಜಯನನ್ನು ಸೆರೆಹಿಡಿದು ಕೆಲವು ಮಂದಿ ಪೋಲೀಸರೊಡನೆ ಧರ್ಮಪುರಿಗೆ ಹೋದರು.

o o o

7 ನೇ ಅಧ್ಯಾಯ

ಆಗಲೇ ಪ್ರಾತಃಕಾಲ. ಪಕ್ಷಿಗಳು ತಮ್ಮ ತಮ್ಮ ಕೆಲಸಕ್ಕೆ ಹೋಗುತ್ತಿವೆ ಸೂರ್ಯನ ಕನ್ನ ಕಿರಣವನ್ನು ಎಲ್ಲಾ ಕಡೆಗೂ ಬೀಡಿಸಿದ್ದಾನೆ. ಧರ್ಮಪುರಿಯ ರಾಜಸ್ಥಾನದಲ್ಲಿ ಜನರು ತುಂಬಿತುಳುಕುತ್ತಿದ್ದಾರೆ. ಸಾಮ್ರಾಜ್ಯಶ್ರೇಷ್ಠನಾದ ಜನಾರ್ದನನು ಸಕಲ ವಿಜಯ ಘೋಷಗಳಿಂದ ಸಿಂಹಾಸನವನ್ನು ಅಲಂಕರಿಸಿದ್ದಾನೆ ಆಗ ವಿಚಾರಣೆಗೆ ಆರಂಭವಾಯಿತು—

ಒಂದು ಕಡೆ	ಮತ್ತೊಂದು ಕಡೆ
ರತ್ನಕಲೆ	
ಸುಂದರೇಶ	ದುರ್ಜಯ
ಕರಿಯ	ಅವನ ಸೇವಕರು

ಸಾಮ್ರಾಜ್ಯಶ್ರೇಷ್ಠನಾದ ಜನಾರ್ದನನ ಪಾದಾರವಿಂದಗಳಿಗೆ ಹೇಳುವುದೇನೆಂದರೆ—

ರತ್ನಕಲೆ— ನಾನು ಭಗವದತ್ತನ ಪತ್ನಿ. ರಾತ್ರಿಯಲ್ಲಿ ಬಂದು ಈ ನೀಚನು ನನ್ನನ್ನು ಎತ್ತಿಕೊಂಡು ಹೋಗಿ ಮಾಡಬಾರದ ಅಪಮಾನಗಳನ್ನು ಮಾಡಿದನು. ನನ್ನ ಮಗನನ್ನೂ ಅಪಹರಿಸಿದನು.

ಕರಿಯ— ನಾನು ಸ್ವಾಮಿಕಾರ್ಯಕ್ಕಾಗಿ ಖೂನಿಮಾಡಿರುವೆನೇ ಹೊರತು, ಸ್ವಂತಕ್ಕಾಗಿ ಅಲ್ಲ.

ಸುಂದರೇಶ— ಮಹಾಪ್ರಭುಗಳೇ! ಈ ನೀಚನಾದ ದುರ್ಜಯನು ನಮ್ಮ ತಾಯಿಯನ್ನು ಅಪಹರಿಸಿದುದಲ್ಲದೆ ಗ್ರಾಮಗಳನ್ನು ಲೂಟಿಮಾಡಿದ್ದಾನೆ. ಇವನನ್ನು ತಮ್ಮ ಪಾದಗಳಲ್ಲಿ ಒಪ್ಪಿಸಿರುತ್ತೇನೆ.

ದುರ್ಜಯ— ನಾನು ಅನೇಕ ಕೊಲೆಗಳನ್ನು ಮಾಡಿದ್ದೇನೆ. ನಾನು ಪರವ, ಜಂಡಾಲನು. ಪ್ರಭುಗಳು ನನಗು ಶಿಕ್ಷೆಯನ್ನು ಬೇಕಾದರೂ ಮಾಡಬಹುದು ಎಂದನು

ಹೀಗೆಂದು ಹೇಳಲು ದೊರೆಯು ದುರ್ಜಯನನ್ನು ಅವನ ಕಡೆಯವರನ್ನೂ ಗಲ್ಲಿಗೆ ಏರಿಸಿ ಪತ್ತೇದಾರನಿಗೆ ಅನೇಕ ಬಹುಮಾನವಿತ್ತನು.

8 ನೇ ಅಧ್ಯಾಯ

ಈಗ ಧರ್ಮಪುರಿಯಲ್ಲಿ ಎಲ್ಲೆಲ್ಲಿ ನೋಡಿದರೂ ಸಂತೋಷ. ಸುಂದರೇಶನು ಕೋಮಲೆಯನ್ನು ಏವಾಹವಾಗಿ ಸುಖವಾಗಿದ್ದನು.

ಸಂಪೂರ್ಣ

ಗಾದೆ

ಚೆನ್ನಾಗಿರತಕ್ಕ ಚಿಕ್ಕಚಿಕ್ಕ ಕಥೆಗಳನ್ನು ಕಳುಹಿಸಿದರೆ, " ಸತ್ಯವಾದಿ " ಯಲ್ಲಿ ಪ್ರಕಟಿಸಲಾಗುವುದು.

ವಿವಿಧ ವಿಷಯ

ಸ್ಟಾಲಿನ್‌ಗ್ರಾಡಿನಲ್ಲಿ ನಾಜಿಗಳ ಸ್ಥಿತಿ ಭಯಂಕರವಾಗಿದೆ. 2 ತಿಂಗಳ ಹಿಂದೆ ಸ್ಟಾಲಿನ್‌ಗ್ರಾಡಿನಲ್ಲಿ ನೋಡಿದಲ್ಲೆಲ್ಲಾ ಉರಿಯೇ ಎದ್ದು ಕಾಣುತ್ತಿದ್ದಿತು. ಈಗ ನಾಜಿಗಳು ರಷ್ಯಾದ ಚಳಿಯನ್ನು ತಡೆಯಲಾರದೇ ಲಟಸಟ ಬದ್ದಾಡುತ್ತಿರುವರು ಹಿಟ್ಲರಿನ 22 ವಿಭಾಗಗಳು ಭಯಂಕರ ಕರವಾದ ಹಾನಿಗೀಡಾಗಿವೆ. ನಾಜಿಗಳು ಹೊಟ್ಟೆಗಿಲ್ಲದೇ ಬಟ್ಟೆಗಿಲ್ಲದೇ ಚಳಿಗೆ ಬಲಿಯಾಗಿ ಸಾಯುತ್ತಿರುವರು. ಹಸಿವೆಯನ್ನು ತಾಳಲಾರದೆ ಸತ್ತ ತಮ್ಮ ಕುದುರೆಗಳನ್ನು ತಿನ್ನುತ್ತಿರುವರು. ದಿನಾಗಲೂ 1200 ಜನರಂತೆ ಕಡಮೆಯಾಗುತ್ತಿರುವರು 2 ಲಕ್ಷದಷ್ಟು ಜನರು 60 ದಿನಗಳ ಹಿಂದೆ ಇದ್ದರು. ಈಗ ಅವರ ಸಂಖ್ಯೆ 80 ಸಾವಿರಕ್ಕೆ ಇಳಿದಿದೆ.

ಲಂಡನ್ ಮೇಲೆ 60 ಜರ್ಮನ್ ವಿಮಾನಗಳು ದಾಳಿ ಮಾಡಲು ಬರಲು, ಆರ್. ಎ. ಎಫ್, ವಿಮಾನಗಳು ಎದುರಿಸಿ, ಅವುಗಳಲ್ಲಿ 13 ನ್ನು ಸುಟ್ಟು ಕೆಡವಿದವು. ಜರ್ಮನ್ ವಿಮಾನಗಳು ಓಡಿಹೋದವು. ಅವುಗಳಲ್ಲಿ 6 ಮಾತ್ರ ಲಂಡನ್ ಭಾಗಗಳಲ್ಲಿ ಬಾಂಬುಗಳನ್ನು ಹಾಕಿ ಒಂದು ಕಡೆ 30 ಬಾಲಕರನ್ನು ಕೊಂದು, ಇನ್ನೊಂದು ಕಡೆ ಅನೇಕ ಹೆಂಗಸರುಮಕ್ಕಳನ್ನು ಅಹುತಿ ತೆಗೆದುಕೊಂಡಿವೆ.

ಲಂಡನ್ ಮೇಲೆ ಜರ್ಮನರು ದಾಳಿ ಮಾಡುವದರಿಂದ, ತಾವೂ ಕೂಡ ರೋಂ ಪಟ್ಟಣದ ಮೇಲೆ ವಿಮಾನದಾಳಿಯನ್ನು ಏಕೆ ನಾಡಕೂಡದೆಂದು ವಿ॥ ಎಸ್. ಅವರು ಹೇಳುತ್ತಾರೆ. ರೋಂನಗರದ ಶಕ್ತಿರದಲೆ ಇಟಲಿಯನರ ಮದು ಗುಂಡು ತ ಯಾರ್ಮಾಡುವ ಕಾರ್ಖಾನೆ ಇರುವದೆಂದು ಹೇಳುತ್ತಾರೆ.

ಬಿಜಾಪುರದಲ್ಲಿ ವೀರಕ್ಷಾಮ ಸಮಯು ಕ್ಕೆ ಬೊಂಬಾಯಿ ವರ್ತಕರು ಅಂವಕ್ಕೆ ದ. ಸಾವಿರ ರೂಪಾಯಿ ಚಾದಾಕೂಡಿಸಿರುವರು. ಎಂಟು ತಿಗಳಿಗೆ ಬೇಕಾದ ಒಂದು ಲಕ್ಷ ರೂಪಾಯಿಯನ್ನು ಕೂಡಲೇ ಕೂಡಿಸಲಿರುವರು.

ಮದರಾಸಿನ ಹೋಟಲಿನವರು ಕೆಲವರು ಚಿಲ್ಲರೆ ನಾಣ್ಯ ತೀರಿಸಿಟ್ಟಿದ್ದರೆಂದು ದಸ್ತಗಿರಿ ಮಾಡಲ್ಪಟ್ಟು ಶಿಕ್ಷಿಸಲ್ಪಟ್ಟರಷ್ಟೆ. ನಿನ್ನೆ ಕೆಲವ ಹೋಟಲು ಮಾಲೀಕರು ತಮ್ಮಲ್ಲಿದ್ದ ಚಿಲ್ಲರೆಯನ್ನು ಇಂಪೀರಿಯಲ್ ಬಾಂಕಿಗೆ ಕಳುಹಿಸಿ ರೂಪಾಯಿಗಳನ್ನು ಪಡೆದುಕೊಳ್ಳುತ್ತಾರೆ.

ಹೋಲಾಪುರದಲ್ಲಿ ಕ್ಷಾಮ ನಿವಾರಣಾ ಕೆಲಸಕ್ಕಾಗಿ ಬೊಂಬಾಯಿ ಸರಕಾರದವರು ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಇದರಿಂದ ಕೆಲವು ಕೆಲಸಗಳನ್ನು ಪ್ರಾರಂಭಮಾಡಿ ಕೂಲೀ ರೂಪವಾಗಿ ಸಹಾಯ ಮಾಡುವರು.

ಕಳೆದ ತಿಂಗಳಲ್ಲಿ ಕಲ್ಕತ್ತಾ ಮೇಲೆ ಜಪಾನರು ದಾಳಿಯಾಯಿತಷ್ಟೆ. ಆವರ ಪರಿಣಾಮವಾಗಿ 62 ಸಾವಿರ ಜನರು ಪಟ್ಟಣವನ್ನು ಬಿಟ್ಟಿರುವರೆಂದು ಸರಕಾರದವರು ಪ್ರಕಟಣೆ ಹೊರಡಿಸಿರುವದಾಗಿ ತಿಳಿಯುಬಂದಿದೆ.

ಮೊನ್ನೆ ಜರ್ಮನಿಯವರ ಆಹಾರ ಸಾಮಗ್ರಿಗಳನ್ನು ಸಾಗಿಸುತ್ತಿದ್ದ 13 ಹಡಗುಗಳು ಏತ್ರಸಕ್ಕದವರಿಂದ ನೆಡಿಟ ರೇಸಿರ್ಯ ಸಮುದ್ರದಲ್ಲಿ ಮುಳುಗಿಸಲ್ಪಟ್ಟವು.

ಮೂಸ್ಕೊ ಸನ್ನಿಗಾರರು ಹೇಳುತ್ತಾರೆ— ಜರ್ಮನರು ರಷ್ಯಾದಲ್ಲಿ ಒಂದು ತರಹ ಇಟ್ಟಿಗೆಯನ್ನು ಶತ್ರುಗಳು ಬರುವ ರಸ್ತೆಯಲ್ಲಿ ಹಾಕುವರು ; ಈ ಇಟ್ಟಿಗೆಯು ಶತಾ 1500 ಡಿಗ್ರಿ ಇರುತ್ತದೆ ಜನರ ಕೂದಲಾಗಲೀ ಕೈಕಾಲುಗಳ ಉಗುರಾಗಲೀ ಒಂದು ಉಳಿಯದೆ ತಕ್ಷಣ ನಮ್ಮ ಯೋಗವುದು

ಕುಂಭಕೋಣಂನಲ್ಲಿ ಬಚ್ಚಲು ನೀರಿನ ಕಂದಾಯ ಸ್ವಲ್ಪ ತಗ್ಗಿಸಲ್ಪಟ್ಟಿದೆ.

1943 ನೇ ಮಸೂರಿಯ ಸ್ಪರ್ಧಾ ಕ್ರಿಕೆಟ್ ತುಂಬಾ ಭಯಂಕರವಾಗಿರುವದೆಂದು ಮಿಲಿಟರಿ ಸಮಾಲೋಚಕರಿಗೆಲ್ಲರ ಅಭಿಪ್ರಾಯ.

ಸ್ವೀಡನ್ನನ್ನು ಏತ್ರಸಕ್ಕದವರು ಮುತ್ತಿಕೊಳ್ಳುವದೆಂದು ಭಯಂಕರವಾಗಿದೆ.

ಶಪಿವಾರದಿಂದ ಜಿಲ್ಲೆಯು ಅಕ್ಷರಶಾಃ ಗಳ ಸಂಬಂಧವನ್ನು ತ್ಯಜಿಸುವುದು.

ಗಾಂಧೀಜಿಯವರೊಬ್ಬರೇ ಭಾರತದ ಜೈಲ್ಗಳನ್ನು ಸಂಪೂರ್ಣವಲ್ಲವೆಂದು ಲಂಡನ್ನಲ್ಲಿ ವೈ॥ ವುಡ್‌ರವರು ತಿಳಿಯಪಡಿಸಿರುವರು.

ಸಂಯುಕ್ತ ಅನೇರಿಕಾದ ಮಾರ್ಸ್ ಎಂಬ ವಿಮಾನವು 70 ಟನ್ ಸಾಮಾನುಗಳನ್ನು ಒಯ್ಯುವುದು. ಈ ವಿಮಾನದ ಮೇಲೆ 35 ಜನರು ನಿಲ್ಲಬಹುದು. ರಕ್ಕೆಗಳ ಕೆಳಗೆ 215 ಜನರು ಕೂತುಕೊಳ್ಳಬಹುದು.

ಕೆಲವು 6 ತಿಂಗಳಲ್ಲಿ ಆಸ್ಟ್ರೇಲಿಯಾ ದೇಶವು 253083000 ಪೌಂಡುಗಳನ್ನು ಯುದ್ಧ ನಿಮಿತ್ತವಾಗಿ ವ್ಯಯಮಾಡಿದೆ.

ಪ್ರಪಂಚದಲ್ಲಿಯು ಮಾನವ ಸಂಘಕ್ಕೆಲ್ಲಾ ಸಮಾನ ಸ್ವಾತಂತ್ರ್ಯವೂ, ಸಮಾನ ಹಕ್ಕುಗಳೂ ಇರಬೇಕೆಂಬ ವಿಷಯವನ್ನು ವಿಶ್ವಮಂಡಲಿಯವರು ಒಪ್ಪಿ ಚೀನಾದೇಶದಲ್ಲಿಯು ತಮ್ಮ ಹಕ್ಕುಗಳನ್ನೆಲ್ಲವನ್ನೂ ಬಿಟ್ಟುಬಿಡೆಯು ಶತ್ರುದೇಶಿಯರಿಗೆ ಆಧ್ಯಾತ್ಮಿಕವಾಗಿ ಸಿಡಿಲು ಬಡಿದಂತಾಗಿದೆಯೆನ್ನಬಹುದು.

ಈಗ ಅನೇರಿಕಾದಲ್ಲಿ ಪ್ರತಿಯೊಬ್ಬನಿಗೂ 300 ರೂಪಾಯಿಗಳಿಗೆ ಕಡಮೆ ಇಲ್ಲದೆ ಸಗದಿರುವುದೆಂದು ತಿಳಿಯುಬಂದಿದೆ. ಒಂದು ವರ್ಷದ ಕೆಳಗೆ 225 ರೂಪಾಯಿ ಮಾತ್ರ ಇದ್ದಿತು. 1929 ರಲ್ಲಿ 123 ರೂಪಾಯಿ ಕಡ್ಡದು ಇದುವರೆಗೂ ಏರಲಿಲ್ಲ. ಟಂಕಸಾಲೆ ಪಟ್ಟವೇಲೆ ಈ ಹಣವೆಲ್ಲಾ ಏನಾಯಿತು ? ಸರ್ಕಾರದವರು ಹೇಳುವುದ — (1) ಸೀಪಾಯಿಗಳ ಕೈಲಿರುತ್ತೆ. (2) ಹೊಸ ವ್ಯಾಪಾರಕ್ಕೆ ಉಪಯೋಗಿಸಲಾಗುತ್ತಿರುವದ. (3) ಕೂಡಿಡುವುದು. ಇಂತಿಗೂಡಲ್ಲೋ ?

ಇಂಡಿಯಾದೇಶದ ಅನೇಕ ಭಾಗಗಳಲ್ಲಿ ಅಹಾರ ಪದಾರ್ಥಗಳ ಅಭಾವವು ಹೆಚ್ಚಿದೆ. ಗೋಧಿ, ಅಕ್ಕಿ, ಸಕ್ಕರೆ, ಕಾಗದ, ಸೀಮೆ ಎಣ್ಣೆ, ರಾಗಿ, ಜೋಳ, ಇವುಗಳಿಗಾಗಿ ಜನಗಳು ಪಡುತ್ತಿರುವ ಪಾತು ಅಪಾರ್ಜನೀಯವಾಗಿದೆ ಪಾಲಕರೂ ಶ್ರೀಮಂತರೂ ದುಸ್ಥಿತಿಯನ್ನು ಅನುಭವಿಸುತ್ತಿರುವರಾಗಲಿ ಇನ್ನೂ ಹೆಚ್ಚು ಶ್ರದ್ಧೆಯನ್ನು ಈ ವಿಷಯದಲ್ಲಿ ಅನುಸರಿಸದಿದ್ದಲ್ಲಿ ಜನರಲ್ಲಿ ಹಾಹಾಕಾರವು ಹೆಚ್ಚುವುದು. ಇಂತಿಸ್ಥಿತಿಯು ಪದಷ್ಟು ಬೇಗ್ಗನೆಯಲ್ಲಿ ಮುಕ್ತಾಯವಾಗುವಂತೆ ಸರ್ಕಾರದವರು ಏರ್ಪಾಡುಮಾಡುವುದು ಅವಶ್ಯವು.

ಬೊಂಬಾಯಿನಲ್ಲಿ ಆಹಾರ ಪದಾರ್ಥ ರೇಷನಿಂಗ್ ಏರ್ಪಾಟಿನಿಂದ ಜಾರಿಗೆ ಬರುವುದು.

ಟುನಿಷಿಯಾದಲ್ಲಿ ಅಕ್ಷಿಸ್ ಸೈನ್ಯ 7 ವೈಲಿ ಸುನ್ನುಗ್ಗಿವೆ.

ಕೃಷ್ಣಾಜಿಲ್ಲೆಯಲ್ಲಿ ಸ್ಟಿಕ್ಟಿನ ಅನೇಕ ಕಡೆಗಳ ಮೇಲೆ ಪುಂಡುಕಂದಾಯ ವಿಧಿಸಲಾಗಿದೆ.

ಅಹಮದಾಬಾದಿನಲ್ಲಿ ಕಛ್ಚೆಯ ಅಜ್ಜಿ ಜಾರಿಯಲ್ಲಿದೆ.

ಪುಲ್ಲಂಪೇಹ ಹಳ್ಳಿ ಪೋಲೀಸ್ ಸ್ಟೇಷನ್ನಿಗೆ ಕಳ್ಳರು ಸುಗ್ಗಿ ಅಲ್ಲಿದ್ದ ಬಂದೂಕ ಮದ್ದು ಗುಂಡು ಮತ್ತಿತರ ಸಾಮಾನುಗಳನ್ನು ಹಾರಿಸಿಕೊಂಡು ಪರಾರಿಯಾದರು.

ವೊರನಾಜ್ ರಂಗದಲ್ಲಿ ರಷ್ಯನರು ವಿಜಯಿಗಳಾಗುತ್ತಿದ್ದಾರೆ.

ಯುದ್ಧನಿಧಿಗಾಗಿ ಕಲ್ಕತ್ತಾದಲ್ಲಿ ನೇ ಜನವರಿಯಲ್ಲಿ ನಡೆಯಬೇಕಾ ಗೌರ್ನರ್ಸ್ 11 ಮತ್ತು ಈಸ್ಟರ್ನ್ ಆ ಕಮ್ಯಾಂಡರ್ಸ್ 11 ಕ್ರಿಕೆಟ್ ಪಂದ್ಯವ ಸೈನ್ಯದ ಆಟಗಾರರು ಬಿಡಲ್ಪಡುವುದಿ ಮಜಾಮಾಡಲಾಗಿದೆ,

ಹೋಂಸ್ ಮತ್ತು ಟಾರ್ಬೂಕ್ ನ್ನು ಬ್ರಿಟಿಷ್ 8 ನೆ ಸೈನ್ಯವು ಹಿಡಿದಿದೆ.

ಶ್ರೀ ಪಂಡಿತ ಜವಹರಲಾಲರ ತಂ ಶ್ರೀ ಇಂದಿರಾನೆಹರೂರವರು ತಮ್ಮ ರಿಷ್ಟರಿಗೆ ಕಾಗದ ಬರೆಯಲು ಸೆಕಾ ವರು ಅವಕಾಶಕೊಟ್ಟಿದ್ದಾರೆ.

ಅನೇರಿಕಾವು ರಷ್ಯಾಕ್ಕೆ ಮಾಡು ಸಹಾಯವು ರಷ್ಯಾಕ್ಕೆ ಅವಶ್ಯಕವಾಗಿ ಆಲ್ಲ.

ಹಾಲೆಂಡ್ ಆಚೆ ಶತ್ರು ಸಾ ಹಡಗುಗಳು ಮುಳುಗಿಸಲ್ಪಟ್ಟವೆಂದು ಳಿಯಬಂದಿದೆ.

ಸಾವಾನಂದದಲ್ಲಿ ಶತ್ರುಗಳ ಸ ಗಳು ಹಿಮಿಯಲಾಗಿವೆ. ನೂರಾರು ದಿಜಪಾ ಸೈನಿಕರು ಕೊಲ್ಲಲ್ಪಟ್ಟಿರು. ಆಸ್ಟ್ರೇಲಿಯನ್ನರು ಜಪಾನ ಅಲ್ಲಿ ನಿರ್ಣಾಮ ಮಾಡುತ್ತಿದ್ದಾರೆ.

ನೂತನ ವರ್ಷಾರಂಭದ ದಿನ ರು ಪಶಪಡಿಸಿಕೊಂಡ ವೆಲಿಂಟನ್‌ಕೋ ಪುನಃ ಕಿತ್ತುಕೊಳ್ಳಲು ಜರ್ಮನರು ಪ್ರಯತ್ನ ನಡೆಸಲು ಪಟಕೊಟ್ಟಿರುವದು ತಿಳಿಯಬಂದಿದೆ.

20 ನೇ ತಾರೀ ಲಂಡನ್ ಮೇಲೆ ಗ್ಗೆ ಹೊತ್ತಿ ಜರ್ಮನ್ ವಿಮಾನಗಳು ದಾಳಿ ನಡೆಸಿ ಸ್ವಲ್ಪ ಸಾವು ನೋವು ಮಾಡಿದವೆಂದೂ ಈ ಪ್ಲೈಕೆ 14 ಹೊ ರಿಳಿಸಲಾಯಿತೆಂದೂ ತಿಳಿಯಬಂದಿದೆ

ಇಂಡಿಯಾದಿಂದ ಸಿಲೋನಿನ ರ್ ತೋಟಗಳಿಗೆ 30 ಸಾವಿರ ಕೂಲಿಗಾರ ನ್ನು ಒದಗಿಸುವ ವಿಷಯದಲ್ಲಿ, ಸಿಲೋನ್ ನಿವಾಸಿಗಳಿಗಿರುವ ಹಕ್ಕು ಜಾಧ್ಯತೆಗಳನ್ನು ಅ ವರಿಗೂ ಸರಿಸಮವಾಗಿ ಕೊಡುವುದಕ್ಕೆ ಇಂಡಿಯಾ ಸರಕಾರದವರು ಕಳುಹಿಸಿ ಒಪ್ಪಬಾರದೆಂದು ಇಂಡಿಯನ್ ಕಾಂಗ್ರೆಸ್ ಸಂಸ್ಥೆಯು ಅಭಿಪ್ರಾಯ.

ಹಿಂದೂಸ್ಥಾನ ಸರಕಾರವನ್ನು ಗೆಜಿಟ್ಟಿನಲ್ಲಿ ' ಚಿಲ್ಲರೆ ಹಣ ಸಂಗ್ರಹ ಮಾಡುವುದು ಮಹಾಪರಾಧವೆಂದೂ, ಚಿಲ್ಲರೆ ಸಂಗ್ರಹಿಸಿದವರನ್ನು ಗೊತ್ತುಮಾಡಿಕೊಟ್ಟವರಿಗೆ ಯೋಗ್ಯ ಬಹುಮಾನ ಕೊಡಲಾಗುವದೆಂದೂ ತಿಳಿಸಲ್ಪಟ್ಟಿರುವದಾಗಿ ತಿಳಿಯಲಾಗಿದೆ.

ಕರ್ನಾಟಕದ ಹೆಮ್ಮೆಯ ಕನ್ನಡ ಚಿತ್ರ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ಸಂಗೀತರತ್ನ ಆಸ್ಥಾನ್ ವಿದ್ವಾನ್ ಟಿ. ಚೌಡಯ್ಯನವರು
ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಲನಚಿತ್ರ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

— ತಾರಾಗಣ —

ಶ್ರೀಮತಿ ಬಳ್ಳಾರಿ ಲಲಿತ, ಟಿ. ಎಸ್. ಚಂದ್ರ, ಕುಮಾರಿ ರತ್ನ, ಸುಂದರೇಜಾಲಯ,
ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮುಕದೇವ್, ಮಾಸ್ಟರ್
ಬಿ. ವಿ. ಕೆ ಮೂರ್ತಿ, ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್
ಹೆಚ್. ಆರ್. ಶಾಸ್ತ್ರಿ, ಎಂ. ಆರ್. ಪಿ. ಸಾರಥಿ.
ಶ್ರೀಮತಿ ಕೆ. ಆರ್, ಶಾಂತರಾಜಮ್ಮ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ
ಎದುರು ನೋಡಿ

ನಿರ್ದೇಶಕರು— ಜಿ ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ ಎಸ್. ತಿಮ್ಮಪ್ಪನವರಿಂದ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.
ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮ್ಬತ್ತೂರು.

— ಹೆಚ್ಚಿನ ವಿವರಗಳಿಗೆ —

ಜಿ. ಆರ್. ರಾಮಯ್ಯ, ಮ್ಯಾನೇಜಿಂಗ್ ಏಜೆಂಟ್ಸ್, ಇವರಲ್ಲಿ ತಿಳಿಯಿರಿ.

H. R. G. C's ree Pictures

GANDHI SQUARE, MYSORE

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ಸಿರಪ್

ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರವ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬರುವಾ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ
ಮತ್ತು ಬರುವ ಮೂಲಿಕೆಗಳ ಮಿಶ್ರಣವಿಲ್ಲ
ಕ್ಷೇಮಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೈಪಿಂಗ್ ಲೆಬೊರೇಟರಿ
ಮಲ್ಲೇಶ್ವರಂ, ಬೆಂಗಳೂರು.

Opera Morning Show From 22-1-4.



ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವ ರುಚಿಕರವಾಗಿದ್ದ, ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು
ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Edited, Printed & published by M. S. Krishna Rao, at the Satyavadi Press, Chamaraja Agrahar, Mysore.